SC 26/23
PW5

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2023** **ಅ.ಸಾ.5**

**ಚಾ.ಸಾ.8**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಾಧವ |
| ತಂದೆಯ ಹೆಸರು | - | ಶ್ರೀನಿವಾಸ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಮೇಸ್ತ್ರಿ |
| ವಿಳಾಸ | - | ನಿಟ್ಟೂರು, ಉಡುಪಿ ತಾಲೂಕು |

ದಿನಾಂಕಃ 25-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಕಳೆದ ಹತ್ತು ವರ್ಷಗಳಿಂದ ಮನೆ ನಿರ್ಮಾಣದ ಗುತ್ತಿಗೆಯನ್ನು ಪಡೆದುಕೊಂಡು ಮನೆ ನಿರ್ಮಾಣ ಮಾಡಿಕೊಡುವ ಕೆಲಸ ಮಾಡುತ್ತೇನೆ. ಈ ಪ್ರಕರಣದ ಮೃತ ಮಾಲತಿ ಕಾಮತ್ ಇವರ ಪರಿಚಯ ಇದೆ. ಶ್ರೀಮತಿ ಮಾಲತಿ ಕಾಮತ್ ಇವರು ಅವರ ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಸಿಕೊಡುವಂತೆ ನನಗೆ ಕಾಮಗಾರಿ ನೀಡಿದ್ದು ರೂ.6,00,000/- ಕ್ಕೆ ಗುತ್ತಿಗೆ ವಹಿಸಿಕೊಂಡಿರುತ್ತೇನೆ. ಆ ಮನೆಯಲ್ಲಿ ಮಾಲತಿಯವರು ಒಬ್ಬಂಟಿಯಾಗಿ ಕೆಲಸ ಮಾಡುತ್ತಿದ್ದರು. 2020 ನೇ ಸಾಲಿನಲ್ಲಿ ಆಕೆಯ ಮನೆಯ ಗುತ್ತಿಗೆ ಕಾಮಗಾರಿಯನ್ನು ವಹಿಸಿಕೊಂಡು ಕೆಲಸ ಪ್ರಾರಂಭಿಸಿರುತ್ತೇನೆ. ಈಗ ವಿಡಿಯೋ ಕಾನ್ಫರೆನ್ಸ್ ಮೂಲಕ ನನಗೆ ತೋರಿಸಿದ ವ್ಯಕ್ತಿಯು ನನ್ನ ಪರಿಚಯದವನಾಗಿದ್ದು ಆತನು ಮಾಲತಿಯವರ ಮನೆಯ ನಿರ್ಮಾಣ ಕೆಲಸದಲ್ಲಿ ನಮ್ಮೊಂದಿಗೆ ಕೂಲಿಯಾಗಿ ಬಂದಿದ್ದ. ಆತನೊಂದಿಗೆ 1 ನೇ ಆರೋಪಿ ಅಶೋಕ ಯಲ್ಲಪ್ಪ ಸುಳನಾವರ್ ಕೂಡ ಕೂಲಿ ಕೆಲಸಕ್ಕೆ ಬಂದಿದ್ದ. ಅವರು ನನ್ನೊಂದಿಗೆ ಹೆಲ್ಪರ್ ಆಗಿ ಕೆಲಸ ಮಾಡಿದ್ದರು. ನಾನು ಪ್ರತೀ ದಿನ ಬೆಳಿಗ್ಗೆ ಆ ಮನೆಯ ಫೌಂಡೇಶನ್ ಬೆಡ್‌ಗೆ ನೀರು ಹಾಯಿಸಲು ಹೋಗುತ್ತಿದ್ದೆ. ನನಗೆ ಭಾಗಶಃ ಹಣವನ್ನು ಮಾಲತಿ ಕಾಮತ್ ಮತ್ತು ಅವರ ಮಕ್ಕಳು ಸಂದಾಯ ಮಾಡಿರುತ್ತಾರೆ.

2. ದಿನಾಂಕ 13-02-2020 ರಂದು ನಾನು ಬೆಳಿಗ್ಗೆ 7-30 ರ ಹೊತ್ತಿಗೆ ಸಿಮೆಂಟ್ ಗೆ ನೀರು ಹಾಯಿಸಲು ಮಾಲತಿ ಕಾಮತ್ ರವರ ಮನೆಗೆ ಹೋಗಿರುತ್ತೇನೆ. ನಾನು ಆ ರೀತಿ ಹೋದಾಗ ಪ್ರತೀ ದಿವಸ ಮಾಲತಿ ಕಾಮತ್ ನನ್ನೊಂದಿಗೆ ಬಂದು ಮಾತನಾಡುತ್ತಿದ್ದರು. ಆ ದಿನ ಅವರು ಕಾಣದೇ ಇದ್ದಾಗ ಅವರ ಅರ್ಧ ಕೆಡವಿದ್ದ ಹಾಲ್‌ಗೆ ಕಟ್ಟಿದ್ದ ಟರ್ಪಾಲನ್ನು ಎತ್ತಿ ನೋಡಿದಾಗ ಮಾಲತಿ ಕಾಮತ್ ರವರು ಮಂಚದಲ್ಲಿ ಮಲಗಿದ ಸ್ಥಿತಿಯಲ್ಲಿ ಕಂಡುಬಂದರು. ಅವರ ಕಿವಿಯಲ್ಲಿ ರಕ್ತ ಬರುತ್ತಿತ್ತು. ಅವರ ಕಿವಿಯ ಬೆಂಡೋಲೆಗಳು ಕಾಣಲಿಲ್ಲ ಮತ್ತು ಅವರು ಮಾತನಾಡುತ್ತಿರಲಿಲ್ಲ. ನಾನು ಕೂಡಲೇ ಪಕ್ಕದ ಮನೆಯ ವೇದವತಿಯವರಿಗೆ ವಿಷಯ ತಿಳಿಸಿದೆ. ನಾವಿಬ್ಬರೂ ನೋಡಿದಾಗ ಮಾಲತಿಯವರು ಮೃತ ಪಟ್ಟಿರುವುದು ಕಂಡುಬಂತು. ನಂತರ ನಾವು ಈ ಮಾಹಿತಿಯನ್ನು ಮಾಲತಿ ಕಾಮತ್ ರವರ ಅಳಿಯ ನಾಗರಾಜ್ ಪ್ರಭು ಇವರಿಗೆ ಫೋನ್ ಮೂಲಕ ತಿಳಿಸಿದೆನು. ಮಾಲತಿ ಕಾಮತ್ ಇವರನ್ನು ಯಾರೋ ಕೊಲೆ ಮಾಡಿ ಆಕೆಯ ಚಿನ್ನಾಭರಣಗಳನ್ನು ದೋಚಿಕೊಂಡು ಹೋಗಿರುತ್ತಾರೆ ಎಂದು ಗೊತ್ತಾಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

3. ನಂತರ ದಿನಾಂಕ 19-02-2020 ರಂದು ಪುನಃ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು ಠಾಣೆಗೆ ಹೋದಾಗ ಈಗ ನ್ಯಾಯಾಲಯದ ಮುಂದೆ ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುವ ಆನಂದ ಬಿನ್ನಾಳ್ ಹಾಗೂ ಅಶೋಕ ಯಲ್ಲಪ್ಪ ಸುಳನಾವರ್ ಠಾಣೆಯಲ್ಲಿದ್ದರು. ಅವರಿಬ್ಬರನ್ನು ನೋಡಿ ಗುರುತಿಸಿರುತ್ತೇನೆ. ಪೋಲಿಸ್ ವಿಚಾರಣೆಯಲ್ಲಿ ಇಬ್ಬರು ಆರೋಪಿತರು ಮಾಲತಿ ಕಾಮತ್ ಇವರನ್ನು ಕೊಲೆ ಮಾಡಿ ಚಿನ್ನಾಭರಣ ದೋಚಿದ ವಿಚಾರ ನನಗೆ ತಿಳಿದು ಬಂತು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದಃ</u>**

ರೂ.6,00,000/- ಕ್ಕೆ ಮಾಲತಿ ಕಾಮತ್ ರವರ ಮನೆ ಕೆಲಸ ವಹಿಸಿಕೊಂಡಿರುತ್ತೇನೆ. ಮನೆ ರಿಪೇರಿ ಕೆಲಸ ಮಾಡುವಾಗ ಕರಾರು ಮಾಡಿಕೊಳ್ಳುತ್ತೇನೆ. ಕರಾರು ಮಾಡಿಕೊಂಡಿರುವ ವಿಚಾರವನ್ನು ಪೋಲಿಸ್ ವಿಚಾರಣೆಯಲ್ಲಿ ಹೇಳಿದ್ದೇನೆ ಮತ್ತು ದಾಖಲೆಯನ್ನು ಕೊಟ್ಟಿದ್ದೇನೆ. ನನ್ನೊಂದಿಗೆ ಐದಾರು ಜನ ಕೆಲಸದವರು ಇರುತ್ತಾರೆ. ಸಾಮಾನ್ಯವಾಗಿ ಸಿಟಿ ಬಸ್ಟ್ಯಾಂಡ್ ನಿಂದ ಕೆಲಸದಾಳುಗಳನ್ನು ಕರೆದುಕೊಂಡು ಹೋಗುತ್ತೇನೆ. ಆಗ ಕೆಲಸದಾಳುಗಳಿಗೆ ದಿನಕ್ಕೆ ರೂ.600/-

ಸಂಬಳ ಕೊಡುತ್ತಿದ್ದೆ. ಸಂಬಳ ಕೊಟ್ಟ ಬಗ್ಗೆ ದಾಖಲೆ ಇಟ್ಟುಕೊಳ್ಳುವುದಿಲ್ಲ. ನಾನು ಮಾಲತಿ ಕಾಮತ್ ರವರ ಮನೆ ಕೆಲಸವನ್ನು ವಹಿಸಿಕೊಂಡದ್ದು ಇಲ್ಲ ಮತ್ತು ಆ ಮನೆಯ ಕೆಲಸಕ್ಕೆ ಕೆಲಸದಾಳುಗಳನ್ನು ಕರೆದುಕೊಂಡು ಹೋದದ್ದು ಇಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ಮತ್ತು ದಿನಾಂಕ 19-02-2020 ರಂದು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಘಟನೆ ನಡೆದ ದಿನ ಆರೋಪಿತರು ಪೋಲಿಸ್ ಠಾಣೆಯಲ್ಲಿ ಇರಲಿಲ್ಲ. ಪೋಲಿಸರು ಆರೋಪಿತರನ್ನು ಪತ್ತೆ ಹಚ್ಚುವ ಬಗ್ಗೆ ನನ್ನನ್ನು ಗೋಕಾಕ್‌ಗೆ ಕರೆದುಕೊಂಡು ಹೋಗಿದ್ದರು. ಆರೋಪಿತರು ಹುಬ್ಬಳ್ಳಿಯಲ್ಲಿ ಸಿಕ್ಕಿರುತ್ತಾರೆ. ವಿಚಾರಣೆ ಮಾಡುವಾಗ ಪೋಲಿಸರಿಗೆ ಈ ವಿಚಾರ ಹೇಳಿರುತ್ತೇನೆ. ಆರೋಪಿತರು ಹುಬ್ಬಳ್ಳಿಯಲ್ಲಿ ಸಿಕ್ಕಿದ್ದಾರೆ ಎಂದು ಪ್ರಥಮ ಬಾರಿಗೆ  ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಹೇಳಿಕೆ ಕೊಟ್ಟದ್ದು ಇಲ್ಲ ಎಂದರೆ ಅವರೇ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹಲವು ಕಡೆ ಮನೆ ನಿರ್ಮಾಣದ ಗುತ್ತಿಗೆ ಪಡೆಯುತ್ತೇನೆ. ಮಾಲತಿಯವರ ಮನೆ ನಿರ್ಮಾಣದ ಸಮಯದಲ್ಲಿ ಹರೀಶ್ ರವರ ಮನೆ ನಿರ್ಮಾಣ ಗುತ್ತಿಗೆ ಪಡೆದಿದ್ದೆ. ಗುತ್ತಿಗೆ ಕಾಮಾಗಾರಿಯ ಮೇಲ್ವಿಚಾರಣೆ ನಾನೇ ಮಾಡುತ್ತೇನೆ. ಮನೆ ಕೆಲಸಕ್ಕೆ ಬೇಕಾಗುವ ಮೇಸ್ತ್ರಿಯವರಿಗೆ ಹೆಲ್ಪರನ್ನು ನಾನೇ ಒದಗಿಸುತ್ತೇನೆ. ನನ್ನ ಕೈಕೆಳಗೆ ನಾಲ್ಕು ಜನ ಮೇಸ್ತ್ರಿಗಳು, ಐದಾರು ಜನ ಸಹಾಯಕರು ಕೆಲಸ ಮಾಡುತ್ತಾರೆ. ಹೆಲ್ಪರ್ ಬೇಕಾದಾಗ ಉಡುಪಿ ಸಿಟಿ ಬಸ್ ಸ್ಟ್ಯಾಂಡಿಗೆ ಬೆಳಿಗ್ಗೆ ಹೋಗಿ ಆ ದಿವಸಕ್ಕೆ ಎಷ್ಟು ಜನರು ಕೆಲಸಕ್ಕೆ ಬೇಕಾಗುತ್ತಾರೆ ಅವರನ್ನು ಕರೆದುಕೊಂಡು ಬರುತ್ತೇನೆ. ಆ ರೀತಿ ಬಂದವರ ಪರಿಚಯ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಘಟನೆಯ ಪೂರ್ವದಲ್ಲಿ ಮಾಲತಿರವರ ಮನೆ ನಿರ್ಮಾಣ ಕೆಲಸಕ್ಕೆ ಇಬ್ಬರು ಮೇಸ್ತ್ರಿಯರು ಮತ್ತು ನಾಲ್ಕು ಜನ ಸಹಾಯಕರು ಬಂದಿರುತ್ತಾರೆ. ಮೇಸ್ತ್ರಿಯವರ ಹೆಸರು ಗೊತ್ತು. ನಾಲ್ಕು ಜನ ಮೇಸ್ತ್ರಿಗಳು, ಐದಾರು ಜನ ಸಹಾಯಕರು ಕೆಲಸ ಮಾಡಿದ ಬಗ್ಗೆ ಲಿಖಿತ ದಾಖಲೆ ಇಲ್ಲ. ಮಾಲತಿರವರ ಮನೆ ನಿರ್ಮಾಣದ ಕೆಲಸಕ್ಕೆ ಬಂದ ಕೆಲಸಗಾರರ ವೈಯಕ್ತಿಕ ಪರಿಚಯ ನನಗೆ ಇಲ್ಲ ಎಂದರೆ ಸರಿಯಲ್ಲ.

ಆರೋಪಿ ಆನಂದ ರಾಮಪ್ಪ ಬಿರ್ನಾಳ್‌ನ್ನು ನ್ಯಾಯಾಲಯದಲ್ಲಿ ಪ್ರಥಮ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿವಸ ನಾನು ಸ್ಥಳಕ್ಕೆ ಬೆಳಿಗ್ಗೆ 6-30 ಕ್ಕೆ ನೀರು ಹಾಕಲು ಹೋಗಿರುತ್ತೇನೆ. ಮಾಲತಿರವರು ಮೃತಪಟ್ಟ ವಿಚಾರ ಬೆಳಿಗ್ಗೆ 7-00 ಗಂಟೆಗೆ ಗೊತ್ತಾಯಿತು. ತಕ್ಷಣ ವಿಚಾರವನ್ನು ಅವರ ಅಳಿಯ ಚಾಸಾ4 ರವರಿಗೆ, ಅಕ್ಕಪಕ್ಕದ ಮನೆಯವರಿಗೆ ಮತ್ತು ಪೋಲಿಸರಿಗೆ ತಿಳಿಸಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದಾಗ ಬೆಳಿಗ್ಗೆ 8-00 ರಿಂದ 8-30

ಆಗಿತ್ತು. ಘಟನೆ ಬಗ್ಗೆ ಪೋಲಿಸರಿಗೆ ಆಗ ತಿಳಿಸಿರುತ್ತೇನೆ. ಅದನ್ನು ಅವರು ದಾಖಲು ಮಾಡಿಕೊಂಡಿರುತ್ತಾರೆ. ಪೋಲಿಸರು ಬರುವ ಹೊತ್ತಿಗೆ ಚಾಸಾ4 ರವರು ಬಂದಿರುತ್ತಾರೆ. ನನ್ನ ಕೈಗೆಳಗೆ ಇಬ್ಬರು ಆರೋಪಿತರು ಕೆಲಸ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ನನಗೆ ತೊಂದರೆ ಆಗಬಹುದು ಎಂದು ಪೋಲಿಸರಿಗೆ ಪ್ರಕರಣದ ಬಗ್ಗೆ ತಪ್ಪು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.